ಅಂಚೇ ಇಲಾಖಾ.

ನಂ. 15. ತಾರೀಖು 10ನೇ ಏಪ್ರಿಲ್ 1884.

ಬೊಂಬೈ ಪೋಸ್ಟ್‌ಮಾಸ್ಟರ್ ಜನರಲ್‌ಯವರಿಂದ ಬಂದ ಇದರಡಿ ಕಂಡ ಇಂಡ್ಯ ಗವರ್ನ್‌ಮೆಂಟಿನಿಂದ ಕೊಡೋಣಾದ ಇಸ್ತಿಹಾರ್‌ನಾಮೆಯು ಸಮಸ್ತ ಜನಗಳ ತಿಳಿವಳಿಕೆಬಗ್ಯೆ ಫಾಯಿಸ್ ಮಾಡಲ್ಪಟ್ಟಿದೆ:—

ಇಸ್ತಿಹಾರ್‌ನಾಮೆ ನಂಬರ್ 18, ಸಿಂಲಾ, 28ನೇ ಮಾರ್ಚಿ 1884.

ಸ್ಯ 1866ನೇ ಇಸವಿ 14ನೇ ನಂಬರ್ ಆಕ್ಟಿನ 63ನೇ ಸೆಕ್ಷನ್‌ನಿಂದ ಕೊಡೋಣಾದ ಅಧಿಕಾರವನ್ನು ಚಲಾಯಿಸುವದರಲ್ಲಿ ಮುಂತ್ರಾಲೋಚಕ ಸಮಾಜದೊಳಗಣ ಗವರ್ನರ್ ಜನರಲ್ ಸಾಹೆಬರವರು, ಇರ್‌ಲಾಂಡ್ ರಿಸ್ಟ್ರೈಯಾನೆ ಜವಾಬ್ದಾರಿಪೋಸ್ಟ್‌ಕಾರ್ಡಿನ ಮೊದಲನೆ ಭಾಗವು ಅದಕ್ಕೆ ಲಗ್ಗತ್ತಾದ ಯರಡನೆ ಅಥವಾ ಜವಾಬ್‌ಬರಿಯತಕ್ಕ ಭಾಗದೊಡನೆ ರವಾನಿಸಲ್ಪಡತಕ್ಕದ್ದೆಂತಲೂ, ಈ ನಿಯಮವು ಅತಿಕ್ರಮಿಸಲ್ಪಟ್ಟರೆ ಪೋಸ್ಟ್‌ಕಾರ್ಡಿನ ಮೊದಲನೇ ಭಾಗವನ್ನ ಪಾವತಿಮಾಡುವಾಗ ಅರ್ಧಆಣೆ ಹಾಸಲ್ ವಸೂಲ್ ಮಾಡತಕ್ಕದ್ದೆಂತಲೂ ವಿಧಿಸುತ್ತಾರೆ.

ಬಿ. ಮರಿಗಂಗಯ್ಯ,
ಅಂಚೇ ಬಕ್ಷಿ.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 1ನೇ ಏಪ್ರಿಲ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಸ್ಯ 1884—85ನೇ ಇಸವಿ ತಾರಣ ಸಂವತ್ಸರಕ್ಕೆ ಕೋಲಾರ ಡಿಸ್ಟ್ರಿಕ್ಟು ಚಿಂತಾಮಣಿ ತಾಲ್ಲೂಕಿನ ಬಾಬತು ಅರಗು ಮತ್ತು ಕುರಂಗದ ಕಲ್ಲುಗಳ ಇಜಾರೆ ಪ್ರತ್ಯೇಕ ಪ್ರತ್ಯೇಕವಾಗಿ ಆ ತಾಲ್ಲೂಕು ಕಛೇರಿಯಲ್ಲಿ ಅಮಲ್‌ದಾರ್‌ರವರ ರೂಬರೂ ಸ್ಯ 1884ನೇ ಇಸವಿ ಏಪ್ರಲ್ ತಾರೀಖು 21ರಲ್ಲು ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ, ಆ ತಾರೀಖಿಗೆ ಸರಿಯಾಗಿ ಇಚ್ಛೈವುಳ್ಳವರು ಆಮಿಾಲರ ರೂಬರೂ ಹಾಜರಾಗಿ ಪೋಟುಪೋಟಿ ಮಾಡಬಹುದು. ಈ ಹರಾಜು ಸದರೀ ತಾರೀಖು ದಿವಿ 11 ಘಂಟೆ ಲಾಗಾಯತು ಸಾಯಿಂಕಾಲ 5 ಘಂಟೆ ವರಿಗೆ ನಡಿಸಲ್ಪಡುವದು. ಈ ಹರಾಜು ಕೋಲಾರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

ಹರಾಜು ಪೂರೈಸಿದ ವಡನೆ ಛಡಸವಾಲ್‌ದಾರನು ಹರಾಜು ಮೊಬಲಗಿಗೆ ಶೇಕಡಾ 25 ರೂಪಾಯಿಮೇರಿಗೆ ಶೇವಣಿ ಇಡಬೇಕು. ಡೆಪುಟಿ ಕಮ್ಮಿಷನರ್ ಸಾಹೇಬರವರಿಂದ ಮಂಜೂರ್‌ಮಾಡಲ್ಪಟ್ಟ ಸಂಗತಿ ಅವನಿಗೆ ತಿಳಿಸಲ್ಪಟ್ಟ ವಡನೆ ಬಾಕಿ ಮೊಬಲಗನ್ನು ಹರಾಜ್ ಮೊಬಲಗಿಗೆ ರೂಪಾಯಿ ವಂದಕ್ಕೆ ವಂದಾಣೆ ಮೇರಿಗೆ ಲೋಕಲ್ ಸೆಸ್ ಸಹಿತ ಪಾವತಿ ಮಾಡಬೇಕು. ಅಥವಾ ಅಮಲ್‌ದಾರರಿಂದ ಮೊಕರರ್ ಮಾಡಲ್ಪಡುವ ಖಿಸ್ತುಗಳ ಪ್ರಕಾರ ಪಾವತೀ ಮಾಡಲು ಬದ್ಧನಾಗಿ ಕ್ರಮಪ್ರಕಾರ ಮುಚ್ಚಳಿಕೆಯನ್ನು ಮತ್ತು ಖಾತರ್ ಜಾಮೀನಿಯನ್ನು ಸಹಾ ಕೊಡಬೇಕು; ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕೆ ತಪ್ಪಿದಾಗ್ಯೂ ಸದರೀ ಬಾಬುಗಳು ಪುನಃ ಹರಾಜ್ ಮಾಡಲ್ಪಡುವದು. ಲುಕ್ಸಾನ್ ಮೊಬಲಗು ತಪ್ಪಿದ ಛಡಸವಾಲ್‌ದಾರನಿಂದ ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು.

ಈ ಹರಾಜ್ ವಿಷಯದಲ್ಲಿ ಇನ್ನು ಯೇನಾದರು ಹೆಚ್ಚು ತಪಶೀಲು ತಿಳಿದುಕೊಳ್ಳಲು ಅಪೇಕ್ಷೆವುಳ್ಳವರು ಆಮಿಾಲರಿಂದ ತಿಳಿದುಕೊಳ್ಳಬಹುದು.

ಜಿ. ರಘುನಾಥ ರಾವ್,
ಫೌರ್ ಡೆ॥ ಕಮ್ಮಿಷನರ್.

ತುಮಕೂರು ಡಿಸ್ಟ್ರಿಕ್ಟು ಸಬಾರ್ಡಿನೇಟ್ ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶೇರಾ ತಾ॥ ಹಂದಿಕುಂಟೆಯಲ್ಲಿರುವ ಶಾನುಭೋಗ ವೆಂಕಟ್ರಾಮಯ್ಯನ ವಿಷಯದಲ್ಲಿ—

ಸ್ಯ 1884ನೇ ಇಸವಿ ದಿವಾಳಿ ವ್ಯಾಜ್ಯ ನಂಬರು 3.

ಹುಕ್ಕುಂ.

ಮೇಲ್ಕಂಡ ಶಾನುಭೋಗ ವೆಂಕಟ್ರಾಮಯ್ಯ ಖುಲಾಸೆಯೂಗಬೇಕೆಂದು ಕೋರಿ ಬರದುಕ್ಕೊಂಡ ಅರ್ಜಿಯು ಮೆಸ್ಸರ್ಸ್. ಕ್ರೈಸ್ ಸಾಹೇಬ್ರರ ರೂಬ್ರುನೂ ಅರ್ಜಿದಾರನ ಪರವಾಗಿ ಇವನ ಸಮಕ್ಷಮದಲ್ಲಿಯೂ ಮತ್ತು ಐರ್ಜ್ ಅರ್ಜಿದಾರನ ಲೇಣೇದಾರರಾದವರ ಪೈಕಿ ಶೇರಾ ತಾಲ್ಲೂಕು ಕಲ್ಲಹಳ್ಳಿ ಮದ್ದೇಗವುಡನ ಯದುರಾಗಿಯೂ ದರ್ಯಾಫ್ತ್ ಮಾಡಲ್ಪಟ್ಟಿತ್ತು.

ಈ ಕೆಳಗೆ ನಮೂದಿಸಲ್ಪಡುವ ಲೇಹೇದಾರ್ರಿಗೆ ಈ ದಫ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ತಾವೆ ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರೆಂದರೆ—ಮಡಿಕೇರಾ ತಾಲ್ಲೂಕು ಗುಡಿಬಂಡೇಲಿರುವ ಭೋಜಪ್ಪ

ಸದರೀ ಶಾನುಭೂಗ ವೆಂಕಟರಾಮಯ್ಯನು ದೀವಾಳಿಯಾದವನೆಂದು ನ್ನು ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದಲ್ಲಿನ ನಿ ರೂಪಣೆಗಳ ಫಲವನ್ನು ಹೊಂದುವದಕ್ಕೆ ಹಕ್ಕುದಾರನಾಗಿರುತ್ತಾನೆಂದು ಇದರಿಂದ ತೀರ್ಮಾನಿಸಲ್ಪಟ್ಟಿರುತ್ತದೆ. ಈ ಕೋರ್ಟು ನಾಜರು ಐರ್ಜ ದಿವಾಳಿಯಾದವನ ಜಿಂದಗಿಗೆ ರಿಸೀವರಾಗಿ ಮೊಕರರ್ರಾಡಲ್ಪಡತಕ್ಕದ್ದೆಂದು ನ್ನು ಸದರೀ ರಿಸೀವರಾದವನು ವಡನೆ ದಿವಾಳಿಯಾದವನ ಜಿಂದಗಿಗೆ ಜವಾಬ್ ಮೂಡತಕ್ಕ ಬಗ್ಯೂ ನಿಗೇವಾನಿ ಮಾಡತಕ್ಕ ಬಗ್ಯೂ ಸಹ ತನ್ನ ರಿಸೀವರ ಕೆಲಸಗಳಿಗೆ ಪುಜ್ಯೇಕ್ತ ಪಡತಕ್ಕದ್ದೆಂದು ನ್ನು ಮತ್ತು ಸದರೀ ರಿಸೀವರನು ತಾನು ನಡಿಸಿದ ಕೆಲಸಗಳ ಪ್ರತಿ ಫಲಕ್ಕಾಗಿ ದಿವಾಳಿಯಾದವನ ಲೇಹೇದಾರರಿಗೆ ಬಟವಾಡೆ ಮೂಡಬೇಕೆಂ ದು ಸಹ ಹುಕ್ಕುಂ ಮೂಡಲ್ಪಟ್ಟು ಇಧೆ.

ಸ್ ಱ 1884ನೇ ಇಸವಿ ಮಾರ್ಚೀ 27ನೇ ತಾರೀಖಿನಲ್ಲು ಕೋರ್ಟು ಮೊಹರ್ ನಮ್ಮ ದಸ್ತಖತ್ತುನಿಸಿ ಕೊಡಲ್ಪಟ್ಟಿತು.

ಸಿ. ಕೈಸ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಆರ್ಜೀ ನಂಬರ್ 130.

ಮೃತಪಟ್ಟ ಪರಮೇಶ್ವರಕಟ್ಟೆ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹೊನ್ನಪ್ಪ ಮೃತಪಟ್ಟ ಸದರೀ ಪರಮೇಶ್ವರಕಟ್ಟೆಗೆ ಹಿರೇ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲ ತಾ॥ ನೆಲ್ಲೀಗೆರೆ ಹೋಬ ಬೆಳ್ಳೂರು ಸ್ಥಳದ ಸದರೀ ಹೊನ್ನಪ್ಪನು, ಸದರೀ ವಾಸಸ್ಥನಾಗಿ ಮೃತಪಟ್ಟ ಪರಮೇಶ್ವರಕಟ್ಟೆ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹೊನ್ನಪ್ಪನ ಅರ್ಜಿಯನ್ನು 1884ನೇ ಇಸವಿ ಜೂರ್ ತಿಂಗಳು ತಾರೀಖು 5ರಲ್ಲು ಮೈಸೂರು ಮೊಕ್ತಾಮಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪರಮೇಶ್ವರಕಟ್ಟೆ ಆಸ್ತಿಗೆ ಹಕ್ಕುದಾರರಾದ ವಿಸಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವೀ ಆರ್ಜೀ ನಂಬರ್ 136.

ಮೃತಪಟ್ಟ ಖಾಜೆ ಸೈದ್ ಅಹಮ್ಮದ್ ಸಾಬನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಖಾಜೆ ಸೈದ್ ನಸರಹುಸ್ಸೇನ್‌ಸಾಬಿ, ಮೃತಪಟ್ಟ ಸದರೀ ಖಾಜೆಸೈದ್ ಅಹಮ್ಮದ್ ಸಾಬರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ಸದರೀ ಖಾಜೆಸೈದ್ ನಸರಹುಸ್ಸೇನ್ ಸಾಬಿ, ಸದರೀ ವಾಸಸ್ಥನಾಗಿ ಮೃತಪಟ್ಟ ಖಾಜೆ ಸೈದ್ ಅಹಮ್ಮದ್ ಸಾಬಿ ಜಿಂದಗೀ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಖಾಜೆಸೈದ್ ನಸರಹುಸ್ಸೇನ್‌ಸಾಬಿ ಅರ್ಜೀಯನ್ನು 1884ನೇ ಇಸವಿ ಜೂರ್ ತಿಂಗಳು ತಾರೀಖು 24ರಲ್ಲು ಮೈಸೂರು ಮೊಕ್ತಾಂ ಈ ಕೋರ್ಟ್‌ನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಖಾಜೆಸೈದ್ ಅಹಮ್ಮದ ಸಾಬರ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರಿರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಏಪ್ರಿಲ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

1884ನೇ ಇಸವಿ ಅರ್ಜೀ ನಂಬರ್ 135.

ಶ್ಲೂಕು ಕಂಜೆನಹಳ್ಳಿಲಿರುವ 1 ಕುಳ್ಳೇಗೌಡ, 2 ಚಿಕ್ಕಬಸವೇಗೌಡ ಮೈನರಾದ ಮಂಜ್ಯ ತಾಲ್ಲೂಕು ಕಂ ಮಗ ಬೊಮ್ಮನ ಆಸ್ತಿ ವಿಷಯದಲ್ಲಿ—

ಬೊಮ್ಮನಿಗೆ ದಾಯಾದಿ ಆಗಬೇಕೆಂಬ ಹಕ್ಕಿನ ಮೇಲೆ ಸದರೀ ಸ್ಥಳದ ಕುಳ್ಳೇಗೌಡ, ಚಿಕ್ಕಬಸವೇಗೌಡ ಸಹ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಮತ್ತು ಸದರೀ ಮೈನರಿಗೆ ಗಾರ್ಡಿಯನ್ ಆಗಿ ವೊಕರರ್ ಮಾಡತಕ್ಕ ಬಗ್ಯೆ ಅಟ್ಟು ಇರುತ್ತಾರೆ.

ಸದರೀ ಅರ್ಜೀ ಹಿಯರಿಂಗ್ ಬಗ್ಯೆ ಮೈಸೂರು ವೊಕ್ತಾಂ ಈ ಕೋರ್ಟಿನಲ್ಲಿ 1884ನೇ ಇಸವಿ ಜೂನ್ ತಾರೀಖು 24ರಲ್ಲು ವೊಕ ಡಿರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿದೆ.

1884ನೇ ಇಸವಿ ಏಪ್ರಿಲ್ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ನಗರ ಡಿವೀಜ್ಯ.

ನಗರ ಡಿವೀಜ್ಯ ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ದೇವಪ್ಪಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪುಟ್ಟಪ್ಪ, ಮೃತಪಟ್ಟ ಸದರೀ ದೇವಪ್ಪಗೌಡನಿಗೆ ತಮ್ಮನು ಆಗಬೇಕೆಂಬ ಹಕ್ಕುದಾರೀ ಮೇಲೆ ಸಾಗರ ತಾಲ್ಲೂಕು ಸದರೀ ಕಾನಗೋಡು ವಾಸಸ್ಥನಾಗಿ ಮೃತಪಟ್ಟ ದೇವಪ್ಪಗೌಡನ ಜಿಂದಗಿ ಬಗ್ಯಾ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್

4ನೇ ಇಸ್ ರೀಖು 2
ಸ್ಯಗ್

1884ನೇ ಇಸವಿ ಅರ್ಜೀ ನಂಬರ್ 135.

ಬ್ಲೂಕು ಕಂಚನಹಳ್ಳೀಲಿರುವ 1 ಕುಳ್ಳೇಗೌಡ, 2 ಚಿಕ್ಕಬಸವೇಗೌಡ ಮೈನರಾದ ಮಂಡ್ಯ ತಾಲ್ಲೂಕು ಕಂ ಮಗ ಬೊಮ್ಮನ ಆಸ್ತಿ ವಿಷಯದಲ್ಲಿ—

ಬೊಮ್ಮನಿಗೆ ದಾಯಾದಿ ಆಗಬೇಕೆಂಬ ಹಕ್ಕಿನ ಮೇಲೆ ಸದರೀ ಸ್ಥಳದ ಕುಳ್ಳೇಗೌಡ, ಚಿಕ್ಕಬಸವೇಗೌಡ ಸಹ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಯೆ ಮತ್ತು ಸದರೀ ಮೈನರಿಗೆ ಗಾರ್ಡಿಯರ್ ಆಗಿ ಮೊಕರರ್ ಮಾಡತಕ್ಕ ಬಗ್ಯೆ ಅಟ್ಟು ಇರುತ್ತಾರೆ.

ಸದರೀ ಅರ್ಜೀ ಹಿಯರಿಂಗ್ ಬಗ್ಯೆ ಮೈಸೂರು ಮೊಕ್ತಾಂ ಈ ಕೋರ್ಟಿನಲ್ಲಿ 1884ನೇ ಇಸವಿ ಜೂನ್ ತಾರೀಖು 24ರಲ್ಲು ಮೊಕ ನೂಡಿರುವದಾಗಿ ಇದರಿಂದ ನೋಟೀಸ್ ಕೊಡೋಣಾಗಿದೆ.

1884ನೇ ಇಸವಿ ಏಪ್ರಿಲ್ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ನಗರ ಡಿವೀಜ್ಯ.

ನಗರ ಡಿವೀಜ್ಯ ಡಿಸ್ಟ್ರಿಕ್ಟು ಜಡ್ಜ್ರೀಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ದೇವಪ್ಪಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಪುಟ್ಟಪ್ಪ, ಮೃತಪಟ್ಟ ಸದರೀ ದೇವಪ್ಪಗೌಡನಿಗೆ ತಮ್ಮನು ಆಗಬೇಕೆಂಬ ಹಕ್ಕುದಾರೀ ಮೇಲೆ ಸಾಗರ ತಾಲ್ಲೂಕು ಜಾಲ ಮಾಸಳೆ ಕಾವಸೆಕೊಡು ಸ್ಥಳದ ಪುಟ್ಟಪ್ಪನು, ಸದರೀ ಕಾನಗೋಡು ವಾಸಸ್ಥನಾಗಿ ಮೃತಪಟ್ಟ ದೇವಪ್ಪಗೌಡನ ಜಿಂದಗಿ ಬಗ್ಯಾ ಬತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟು ಬ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಪುಟ್ಟಪ್ಪನ ಅರ್ಜೀಯನ್ನು 1884ನೇ ಇಸವಿ ಜೂನ್ ತಿಂಗಳು ತಾರೀಖು 26ರಲ್ಲು ಕೇಳಿ ಸರ್ಟಿಫಿ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವಪ್ಪಗೌಡನ ಆಸ್ತಿಗೆ ಹಕ್ಕುದಾ ದ ವಿಶ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 46.

ಮೃತಪಟ್ಟ ಹಲಸಿನಗೊಂದಿ ಪರಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳು ಕಿದ್ದವ್ವ, ಮೃತಪಟ್ಟ ಸದರೀ ಹಲಸಿನಗೊಂದಿ ಪರಂಣನಿಗೆ ತಾಯಿಯು ಆಗಬೇಕೆಂಬ ಹಕ್ಕುದಾರೀ ಮೇಲೆ ತರೀಕೆರೆ ಲ್ಲೂಕು ಬುಕ್ಕಾಂಬುಧಿ ಸ್ಥಳದ ಕಿದ್ದವ್ವ, ಸದರೀ ಬುಕ್ಕಾಂಬುಧಿ ವಾಸಸ್ಥನಾಗಿ ಮೃತಪಟ್ಟಹಲಸಿನಗೊಂದಿ ಪರಂಣನ ಜಿಂದಗಿ ಬಗ್ಯಾಗಿ ಬರ 1,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಕಿದ್ದವ್ವನ ಅರ್ಜೀಯನ್ನು 1884ನೇ ಇಸವಿ ಜೂನ್ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಲಸಿನಗೊಂದಿ ಪರಂಣನ ಆಸ್ತಿಗೆ ಹಕ್ಕು ದಾರಾದ ವಿಶ್ವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1884ನೇ ಇಸವಿ ಏಪ್ರಿಲ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.